ದಿನಾಂಕಃ 20-10-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ

ಈಗಲೂ ಸಹ ನಾನು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ ಎಂದರೆ ಸರಿ ಅಲ್ಲ. ಎದುರುದಾರನು ಹೂವಿನ ವ್ಯಾಪಾರ ಮಾಡುತ್ತಾನೆ ಎಂದರೆ ಸರಿ. ಎದುರುದಾರನಿಗೆ ತಂದೆ ತಾಯಿ ಮತ್ತು ತಂಗಿ ಇದ್ದಾರೆ ಎಂದರೆ ಸರಿ. ನಾನು ಎದುರುದಾರರ ವಿರುದ್ಧ ಸುಳ್ಳು ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದ್ದರಿಂದ ನನ್ನ ಮಾವ ಮೃತಪಟ್ಟ ಎಂದರೆ ಸರಿ ಅಲ್ಲ. ಎದುರುದಾರರ ತಂದೆ ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಎದುರುದಾರ ಹೊಂದಿದ್ದಾನೆ ಎಂದರೆ ಸರಿ. ಎದುರುದಾರನು ಮಾನವಿ ನಗರದಲ್ಲಿ ಬಾಡಿಗೆ ಮನೆಯಲ್ಲಿ ಇದ್ದಾನೆ ಎಂದರೆ, ನನಗೆ ಗೊತ್ತಿಲ್ಲ. ಪ್ರತಿತಿಂಗಳು ರೂ.6000/- ಬಾಡಿಗೆ ಕಟ್ಟುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರನು ತನ್ನ ತಾಯಿಯ ವೈದ್ಯಕೀಯ ಖರ್ಚಿಗಾಗಿ ಪ್ರತಿತಿಂಗಳು ರೂ.6 ಸಾವಿರ ದಿಂದ ರೂ.7 ಸಾವಿರ ಪಾವತಿಸುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮಾವ ಮೃತಪಟ್ಟಾಗ ನನಗೆ ಹೇಳದ ಕಾರಣ ನಾನು ಹೋಗಿರಲಿಲ್ಲ. ನಾನು ಮದುವೆ ಆದಾಗಿನಿಂದಲೂ ನನ್ನ ತವರು ಮನೆಯಲ್ಲಿಯೋ ಇದ್ದೇನೆ ಎಂದರೆ ಸರಿ ಅಲ್ಲ. ನಾನು ಯಾವತ್ತು ಕೂಡಾ ಎದುರುದಾರರ ಮನೆಗೆ ಹೋಗಿಲ್ಲ ಎಂದರೆ ಸರಿ ಅಲ್ಲ. ಎದುರುದಾರರು ಬಾಡಿಗೆ ಇದ್ದ ಮಾಲೀಕರ ಹೆಸರು, ಅದು ಯಾವ ಓಣಿಯಲ್ಲಿ ಇದೆ ಎಂದು ನನಗೆ ಹೊರಗೆ ಹೋಗಲು ಬಿಡದ ಕಾರಣ ನನಗೆ ಹೇಳಲಾಗುವುದಿಲ್ಲ. ಆ ಮನೆಯ ಅಕ್ಕಪಕ್ಕದಲ್ಲಿ ಯಾರು ಇದ್ದಾರೆ ನನಗೆ ಗೊತ್ತಿಲ್ಲ.

ನಮ್ಮ ತಂದೆ ನಿವೃತ್ತ ನೌಕರ ಎಂದರೆ ಸರಿ. ನನ್ನ ಅಣ್ಣ ಖಾಸಗಿ ಸಂಸ್ಥೆಯಲ್ಲಿ ನೌಕರಿ ಮಾಡುತ್ತಾನೆ ಎಂದರೆ ಸರಿ. ಆತನಿಗೆ ಸಂಬಳ ಬರುತ್ತದೆ ಎಂದರೆ ಸರಿ. ನಮ್ಮ ತವರು ಮನೆಯ ಕುಟುಂಬ ಸ್ಥಿತಿವಂತರ ಕುಟುಂಬ ಎಂದರೆ ಸರಿ ಅಲ್ಲ. ನಮ್ಮ ಮನೆ ಎರಡು ಅಂತಸ್ತಿನ ಒಂದು ಕೋಟಿ ಬೆಲೆ ಬಾಳುವ ಮನೆ ಇದೆ ಎಂದರೆ ಸರಿ ಅಲ್ಲ.

ಎದುರುದಾರನು ವಿದ್ಯಾಭ್ಯಾಸ ಮಾಡಿಲ್ಲದ ಕಾರಣ ನಾನು ವಿವಾಹ ವಿಚ್ಛೇದನ ಕೋರಿದ್ದೆ ಎಂದರೆ ಸರಿ ಅಲ್ಲ. ಎದುರುದಾರನ ವಿರುದ್ಧ ಸಿಂಧನೂರು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ

ವಿವಾಹ ವಿಚ್ಛೇದನೆ ಕೋರಿ ಅರ್ಜಿ ಸಲ್ಲಿಸಿದ್ದೆ, ಅದರಲ್ಲಿ ವಿವಾಹ ವಿಚ್ಛೇದನೆ ಆದೇಶ ಆಗಿದೆ. ನಾನು ಸ್ಥಿತಿವಂತಳು ಇರುವ ಕಾರಣ ಮತ್ತು ಎದುರುದಾರರು ಕೇವಲ ಹೂವಿನ ವ್ಯಾಪಾರ ಮಾಡುವ ಕಾರಣ ವಿವಾಹ ವಿಚ್ಛೇದನೆ ಸಲ್ಲಿಸಿದ್ದೆ ಎಂದರೆ ಸರಿ ಅಲ್ಲ. ನಾನು ಎದುರುದಾರರ ಮನೆಗೆ ಯಾವತ್ತು ಹೋಗಿರುವುದಿಲ್ಲ, ನನ್ನ ಅರ್ಜಿಯಲ್ಲಿ ಹೇಳಿರುವಂತೆ ಎದುರುದಾರರು ನನಗೆ ಯಾವುದೇ ಕಿರುಕುಳ ನೀಡಿಲ್ಲ ಎಂದರೆ ಸರಿ ಅಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಕಂಡುಬರದಿದ್ದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.